RNU AIR DHARWAD

SEPTEMBER 20, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ನಾಳೆಯಿಂದ ರಾಜ್ಯ ವಿಧಾನಮಂಡಲದ,** ಮೂರು ದಿನಗಳ ವಿಶೇ ’ ಅಧಿವೇಶನ; ಕಸ್ತೂರಿರಂಗನ್ ವರದಿ ಬಗ್ಗೆ, ವಿಸ್ತೃತ ಚರ್ಚೆ.
- **ಮೂರನೇ ರಾಷ್ಟ್ರೀಯ ಜನತಾ ನ್ಯಾಯಾಲಯ;** ಧಾರವಾಡ ಉಚ್ಚ ನ್ಯಾಯಾಲಯದಲ್ಲಿ, 201 ಪ್ರಕರಣಗಳು, ಇತ್ಯರ್ಥ.
- **ಭಾರತೀಯ ಕರಾವಳಿ ಕಾವಲು ಪಡೆಯ,** ಸಾವಿತ್ರಿಬಾಯಿ ಫುಲೆ ನೌಕೆಗೆ, ಕಾರವಾರದಲ್ಲಿ ವಿದಾಯ.
- **‘ಸೇವಾ ಸಂಕಲ್ಪ ಅಭಿಯಾನ’;** ‘ವೋಕಲ್ ಫಾರ್ ಲೋಕಲ್’ ಅಭಿಯಾನಕ್ಕೆ, ಕೇಂದ್ರ, ಒತ್ತು.

<><><>

**ಈಗ ವಾರ್ತೆಗಳ ವಿವರ**

<><><>

**ಪಶ್ಚಿಮಘಟ್ಟಗಳ ಕುರಿತ, ಡಾಕ್ಟರ್ ಕೆ. ಕಸ್ತೂರಿರಂಗನ್** ವರದಿ ಬಗ್ಗೆ, ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳಿಂದ ಅಭಿಪ್ರಾಯ ಸಂಗ್ರಹಿಸಿದ್ದು, ನಾಳೆಯಿಂದ ಮೂರು ದಿನಗಳ ಕಾಲ ನಡೆಯಲಿರುವ, ವಿಧಾನಮಂಡಲದ ವಿಶೇ ’ ಅಧಿವೇಶನದಲ್ಲಿ ಚರ್ಚಿಸಿ, ಮಲೆನಾಡು ಭಾಗದ ಜನರ, ಹಿತ ಕಾಯುವ ನಿಟ್ಟಿನಲ್ಲಿ, ಸರ್ಕಾರ ಸೂಕ್ತ ನಿರ್ಣಯ ಕೈಗೊಳ್ಳಲಿದೆ ಎಂದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ತಿಳಿಸಿದ್ದಾರೆ.ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿಯಲ್ಲಿ ಹಾಗೂ ಚಿಕ್ಕಮಗಳೂರು ಜಿಲ್ಲೆ, ಬಾಳೆಹೊನ್ನೂರಿನಲ್ಲಿ ಸಾರ್ವಜನಿಕರೊಂದಿಗೆ, ಅವರು ಸಂವಾದ ನಡೆಸಿದರು. ಮಲೆನಾಡಿನ ಕಾಡಂಚಿನಲ್ಲಿ ವಾಸಿಸುವ ಜನರಿಗೆ, ಯಾವುದೇ ತೊಂದರೆಯಾಗದಂತೆ, ತಮ್ಮ ಸರ್ಕಾರ, ಕೇಂದ್ರಕ್ಕೆ ವರದಿ ಸಲ್ಲಿಸಲಿದೆ ಎಂದು, ಭರವಸೆ ನೀಡಿದರು. ರಾಜ್ಯದ ಕರಾವಳಿಯ, 364 ಕಿಲೋ ಮೀಟರ್ ನೊಂದಿಗೆ, ಮಲೆನಾಡನ್ನೂ ಸೇರಿಸಿ, ಹೊಸ ಪರಿಸರ ಪ್ರವಾಸೋದ್ಯಮ ನೀತಿ ಜಾರಿಗೆ, ನಿರ್ಧರಿಸಿದ್ದಾಗಿ, ಮುಖ್ಯಮಂತ್ರಿ ನುಡಿದರು.

<><><>

**ಕರ್ನಾಟಕ ಉಚ್ಚ ನ್ಯಾಯಾಲಯದ,** ಧಾರವಾಡ ಪೀಠದಲ್ಲಿ, ರಾಷ್ಟ್ರೀಯ ಜನತಾ ನ್ಯಾಯಾಲಯದಡಿ, ರಾಜೀ ಸಂಧಾನಕ್ಕೆ ಯೋಗ್ಯವಾದ ಪ್ರಕರಣಗಳ ವಿಚಾರಣೆ ನಡೆಯಿತು. ಮೂರನೇ ರಾಷ್ಟ್ರೀಯ ಲೋಕ ಅದಾಲತ್ ನಲ್ಲಿ, ನ್ಯಾಯಮೂರ್ತಿ ಟಿ. ವೆಂಕಟೇಶ

ನಾಯ್ಕ ಮತ್ತು ಟಿ.ಎಮ್. ನದಾಫ್ ಅವರ, 2 ಪೀಠಗಳಲ್ಲಿ, ಒಟ್ಟು 660 ಪ್ರಕರಣಗಳನ್ನು ವಿಚಾರಣೆಗೆ ಪಟ್ಟಿ ಮಾಡಲಾಗಿತ್ತು. ಆ ಪೈಕಿ ಒಟ್ಟು 201 ಪ್ರಕರಣಗಳನ್ನು 4 ಕೋಟಿ 55 ಲಕ್ಷ 63 ಸಾವಿರ ರೂಪಾಯಿ ಪರಿಹಾರ ಆದೇಶದ ಮೂಲಕ, ಇತ್ಯರ್ಥ ಪಡಿಸಲಾಗಿದೆ.

<><><>

**ಭಾರತದ ಕರಾವಳಿ ರಕ್ಷಣೆಗೆ,** ಎರಡು ದಶಕಗಳ ಕಾಲ, ಮಹತ್ವದ ಸೇವೆ ಸಲ್ಲಿಸಿದ, ಭಾರತೀಯ ಕರಾವಳಿ ಕಾವಲು ಪಡೆಯ ಹೆಮ್ಮೆಯ ನೌಕೆ, ಸಾವಿತ್ರಿಬಾಯಿ ಪುಲೆಗೆ, ಕಾರವಾರ ಬಂದರಿನ ಧಕ್ಕೆಯಲ್ಲಿ, ಗೌರವಯುತ ವಿದಾಯ ನೀಡಲಾಯಿತು. ಧ್ವಜಾವತರಣದ ಬಳಿಕ, ಕೋಸ್ಟ್ ಗಾರ್ಡ್ ಸಿಬ್ಬಂದಿ, ಗೌರವ ವಂದನೆ ಸಲ್ಲಿಸಿದರು. ತಟ ರಕ್ಷಕ ಪಡೆಯ, ಉಪ ಮಹಾನಿರ್ದೇಶಕ, ಪ್ರವೀಣಕುಮಾರ ಮಿಶ್ರಾ, ಕರಾವಳಿ ಕಾವಲು ಪಡೆಯ ಇತಿಹಾಸದಲ್ಲಿ, ಸಾವಿತ್ರಿಬಾಯಿ ಪುಲೆ ನೌಕೆಯ ಕೊಡುಗೆ ಮತ್ತು ಪರಂಪರೆ, ಸದಾ ಸ್ಮರಣೀಯವಾಗಿರಲಿದೆ ಎಂದರು.

<><><>

**ವಿಜಯನಗರ ಜಿಲ್ಲೆ, ಹೊಸಪೇಟೆಯ,** 31ನೇ ವಾರ್ಡ್‌ನ ಅಂಗನವಾಡಿ ಕೇಂದ್ರ 3ರಲ್ಲಿ, 'ಬೇಟಿ ಬಚಾವೋ, ಬೇಟಿ ಪಢಾವೋ' ಹಾಗೂ ರಾಷ್ಟ್ರೀಯ ಪೋ ‘ಣ ಮಾಸಾಚರಣೆ ಅಂಗವಾಗಿ, ಗರ್ಭಿಣಿಯರಿಗೆ ಸೀಮಂತ ಹಾಗೂ ಮಕ್ಕಳಿಗೆ ಅನ್ನಪ್ರಾಶನ ಕಾರ್ಯಕ್ರಮ, ನೆರವೇರಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರ್ದೇಶಕ, ಡಾಕ್ಟರ್ ಎನ್. ಮಹೇಶಬಾಬು ಚಾಲನೆ ನೀಡಿದರು. ಗರ್ಭಿಣಿಯರು ಹಾಗೂ ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕ ಆಹಾರದ ಬಗ್ಗೆ ಕುಟುಂಬಗಳು ಹೆಚ್ಚಿನ ಕಾಳಜಿ ವಹಿಸಬೇಕು ಎಂದರು.

<><><>

**'ಸೇವಾ ಸಂಕಲ್ಪ ಅಭಿಯಾನ'ದ ಹಿನ್ನೆಲೆ,** 'ಸ್ಥಳೀಯ ಉತ್ಪನ್ನ ಮತ್ತು ಸೇವೆಗಳಿಗೆ, ಧ್ವನಿಯಾಗೋಣ; ಸ್ವಾವಲಂಬನೆಯ ಹೆಜ್ಜೆಗೆ ಜೊತೆಯಾಗೋಣ' ಎಂಬ ಉದ್ದೇಶದಿಂದ, 'ವೋಕಲ್ ಫಾರ್ ಲೋಕಲ್' ಅಭಿಯಾನಕ್ಕೆ, ಕೇಂದ್ರ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ. ಕೇವಲ ಸ್ಥಳೀಯ ವಸ್ತುಗಳನ್ನು ಖರೀದಿಸುವುದಷ್ಟೇ ಅಲ್ಲ; ನಮ್ಮ ನೆಲದ ಜ್ಞಾನ, ಪರಂಪರೆ ಮತ್ತು ಪ್ರತಿಭೆಗೆ ಮೌಲ್ಯ ನೀಡುವ ಮನೋಭಾವ ಉದ್ದೀಪಿಸುವ, ಮಹತ್ವಾಕಾಂಕ್ಷೆಯನ್ನು, ಕೇಂದ್ರ ಸರ್ಕಾರ ಹೊಂದಿದೆ. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು, ಆಹಾರ ಸಂಸ್ಕರಣಾ ಉದ್ದಿಮೆಗಳ ಮೂಲಕ, ಸ್ಥಳೀಯ ಕಲೆ–ಕೌಶಲ್ಯ, ರೈತರು, ಕುಶಲಕರ್ಮಿಗಳ ಸೇವೆ ಹಾಗೂ ಉತ್ಪನ್ನಗಳಿಗೆ ಆದ್ಯತೆ ನೀಡಿ, ಪ್ರೋತ್ಸಾಹಿಸುವ ಚಿಂತನೆ – ವೋಕಲ್ ಫಾರ್ ಲೋಕಲ್. ಆತ್ಮನಿರ್ಭರ ಭಾರತ ನಿರ್ಮಾಣದ ಗುರಿಯೊಂದಿಗೆ, ಗ್ರಾಮೀಣ ಉದ್ಯಮಗಳಿಗೆ ಬೆಂಬಲ, ಕುಶಲಕರ್ಮಿಗಳ ಕೈಕೆಲಸಕ್ಕೆ ಗೌರವ ಹಾಗೂ ರೈತರ ಮೌಲ್ಯವರ್ಧಿತ ಉತ್ಪನ್ನಗಳಿಗೆ, ಸೂಕ್ತ ಮಾರುಕಟ್ಟೆ ಕಲ್ಪಿಸುವ ಗುರಿ, ಹೊಂದಲಾಗಿದೆ.

**ಮೈಸೂರಿನ ಮಹಿಳಾ ನವೋದ್ಯಮಿ,** ಕೃಷಿಕ ಮಹಿಳೆ, ಅನಿತಾ ಸದಾನಂದ ಅವರು, Mamma Mills Foods Private Limited ಮೂಲಕ, ಆರ್ಗ್ಯಾನಿಕ್ಸ್ ಮಂಡ್ಯದಿಂದ, ಪೌಷ್ಟಿಕಾಂಶ ಖಾದ್ಯಗಳನ್ನು, ಮಾರುಕಟ್ಟೆಗೆ ಪರಿಚಯಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅನಿತಾ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಅನಿತಾ ಸದಾನಂದ ಧ್ವನಿ 45 ಸೆಕೆಂದುಗಳು**

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಕೇಂದ್ರೀಯ ರೇಷ್ಮೆ ಮಂಡಳಿಯ,** 77ನೇ ಸಂಸ್ಥಾಪನಾ ದಿನಾಚರಣೆ, ಇಂದು. ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಆವರಣದ, ಗಾಂಧಿ ಕೃಷಿ ವಿಜ್ಞಾನ ಕೇಂದ್ರದ, ಡಾಕ್ಟರ್ ಬಾಬು ರಾಜೇಂದ್ರ ಪ್ರಸಾದ, ಅಂತಾರಾಷ್ಟ್ರೀಯ ಸಭಾ ಕೇಂದ್ರದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ವಿಶೇಷ ಕಾರ್ಯಕ್ರಮ ಆಯೋಜಿತವಾಗಿದೆ. ಕೇಂದ್ರದ ಜವಳಿ ಖಾತೆ ಸಚಿವ, ಗಿರಿರಾಜ ಸಿಂಗ್, ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು.

<><><>

**ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕು,** ಹರವು ಗ್ರಾಮದ, ಪ್ರಾಚೀನ ಶ್ರೀ ರಾಮದೇವರ ದೇಗುಲದ ಆವರಣದಲ್ಲಿ, ವೀರಗಲ್ಲು ಉದ್ಯಾನ ನಿರ್ಮಾಣವಾಗುತ್ತಿದೆ. ರಾಜ್ಯ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಹರವು ಗ್ರಾಮ ದೇಗುಲದ, ಸಮಗ್ರ ಅಭಿವೃದ್ಧಿ ಹಾಗೂ 1 ಕೋಟಿ 25 ಲಕ್ಷ ರೂಪಾಯಿ, ಅಂದಾಜು ವೆಚ್ಚದಲ್ಲಿ, ವೀರಗಲ್ಲು ಉದ್ಯಾನ ನಿರ್ಮಿಸುತ್ತಿದೆ. ಹರವು ಗ್ರಾಮದ ಗದ್ದೆ ಬದುವಿನಲ್ಲಿದ್ದ, 70ಕ್ಕೂ ಹೆಚ್ಚು ವೀರಗಲ್ಲುಗಳನ್ನು, ಮಂಡ್ಯ ಜಿಲ್ಲೆ ಪ್ರಾಚೀನ ಸ್ಮಾರಕಗಳ, ಸಂರಕ್ಷಣಾ ಒಕ್ಕೂಟದ ಪ್ರಧಾನ ಕಾರ್ಯದರ್ಶಿ, ಹರವು ದೇವೇಗೌಡ ಸಂರಕ್ಷಿಸಿದ್ದಾರೆ.

<><><>

**ರಾಷ್ಟ್ರೀಯ ಶಿಕ್ಷಣ ನೀತಿ – 2020,** ಭಾರತದ ಶಿಕ್ಷಣ ವ್ಯವಸ್ಥೆಗೆ, ಹೊಸ ರೂಪ ನೀಡಿದ ಮಹತ್ವದ ಹೆಜ್ಜೆ. ಕೇಂದ್ರ ಸಚಿವ ಸಂಪುಟ, 2020ರ ಜುಲೈ 29 ರಂದು NEP 2020ಕ್ಕೆ ಅನುಮೋದನೆ ನೀಡಿತು.1968 ರಿಂದ, ಭಾರತೀಯ ಶಾಲಾ ಶಿಕ್ಷಣದಲ್ಲಿ ಜಾರಿಯಲ್ಲಿದ್ದ, 10+2 ಶಿಕ್ಷಣ ವ್ಯವಸ್ಥೆಗೆ, 2020ರ ರಾಷ್ಟ್ರೀಯ ಶಿಕ್ಷಣ ನೀತಿ, ಹೊಸ ರೂಪ ನೀಡಿತು. ಇದರೊಂದಿಗೆ ಶಾಲಾ ಶಿಕ್ಷಣದ ರಚನೆಯನ್ನು, 5+3+3+4 ಮಾದರಿಗೆ, ಪರಿವರ್ತಿಸಲಾಯಿತು. ರಾಷ್ಟ್ರೀಯ ಶಿಕ್ಷಣ ನೀತಿ ಅಡಿ, ಪ್ರಶಿಕ್ಷಣಾರ್ಥಿ ಶಿಕ್ಷಕರ ಕಲಿಕಾ ಕ್ರಮದಲ್ಲೂ ಮಹತ್ವದ ಬದಲಾವಣೆ, ತರಲಾಗಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ, ಶಿಕ್ಷಣ ನಿಕಾಯದ ವಿದ್ಯಾಧಿಕಾರಿ, ಪ್ರೊಫೆಸರ್ ಜಿ.ಆರ್. ಅಂಗಡಿ.

<><><>

**ಪ್ರೊ. ಜಿ.ಆರ್.ಅಂಗಡಿ ಧ್ವನಿ 60 ಸೆಕೆಂಡುಗಳು**

<><><>

**ಸಂಕ್ಷಿಪ್ತ ಸುದ್ದಿಗಳು**

<><><>

**"ಸುದೃಢ ಪ್ರಜಾಪ್ರಭುತ್ವಕ್ಕಾಗಿ ಓಟ"** ಎಂಬ ಧ್ಯೇಯದೊಂದಿಗೆ, ಸ್ವೀಪ್ ಮತದಾರರ ಜಾಗೃತಿ ಅಭಿಯಾನದ ಅಂಗವಾಗಿ, ಇಂದು ಬಳ್ಳಾರಿ ನಗರದಲ್ಲಿ, ಮ್ಯಾರಥಾನ್ ನಡೆಯಲಿದೆ.

<><><>

**ಕೊಡಗು ಜಿಲ್ಲೆಯ, ದುಬಾರೆ ಆನೆ ಶಿಬಿರ,** ಇಂದಿನಿಂದ ಸಾರ್ವಜನಿಕರ ವೀಕ್ಷಣೆಗೆ ಮುಕ್ತವಾಗಲಿದೆ. ಬೆಳಗ್ಗೆ 9.30 ರಿಂದ 11.30ರ ವರೆಗೆ ಮಾತ್ರ, ಶಿಬಿರ ನಡೆಯಲಿದೆ.

<><><>

**ಕೋಲಾರ ಸೇರಿದಂತೆ, ರಾಜ್ಯದ ಗ್ರಾಮೀಣ** ಸಮುದಾಯಗಳಲ್ಲಿ, ಶುಚಿತ್ವ ಹಾಗೂ ನೈರ್ಮಲ್ಯ ಅಭ್ಯಾಸಗಳನ್ನು ರೂಢಿಸುವ ನಿಟ್ಟಿನಲ್ಲಿ, ಅಕ್ಟೋಬರ್ 2ರ ವರೆಗೆ, 31 ಜಿಲೆಗಳಲ್ಲಿ, 'ಸ್ವಚ್ಛತೆಯೇ ಸೇವೆ' ಅಭಿಯಾನ ಜರುಗಲಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ನಾಳೆಯಿಂದ ರಾಜ್ಯ ವಿಧಾನಮಂಡಲದ,** ಮೂರು ದಿನಗಳ ವಿಶೇ ’ ಅಧಿವೇಶನ; ಕಸ್ತೂರಿರಂಗನ್ ವರದಿ ಬಗ್ಗೆ, ವಿಸ್ತೃತ ಚರ್ಚೆ.
- **ಮೂರನೇ ರಾಷ್ಟ್ರೀಯ ಜನತಾ ನ್ಯಾಯಾಲಯ;** ಧಾರವಾಡ ಉಚ್ಚ ನ್ಯಾಯಾಲಯದಲ್ಲಿ, 201 ಪ್ರಕರಣಗಳು, ಇತ್ಯರ್ಥ.
- **ಭಾರತೀಯ ಕರಾವಳಿ ಕಾವಲು ಪಡೆಯ,** ಸಾವಿತ್ರಿಬಾಯಿ ಫುಲೆ ನೌಕೆಗೆ, ಕಾರವಾರದಲ್ಲಿ ವಿದಾಯ.
- **'ಸೇವಾ ಸಂಕಲ್ಪ ಅಭಿಯಾನ';** 'ವೋಕಲ್ ಫಾರ್ ಲೋಕಲ್' ಅಭಿಯಾನಕ್ಕೆ, ಕೇಂದ್ರ, ಒತ್ತು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>